ಮಾಡಬೇಕಾಗಿರಲಿಲ್ಲ.

ತೀರಾ ಪಕ್ಕದಲ್ಲೇ ಬಂದ ಬಸ್ಸು ಜೋರಾಗಿ ಹಾರ್ನ್ ಮಾಡಿದ್ದಕ್ಕೆ ಬೆಚ್ಚಿ ಸ್ಕೂಟರ್‌ನ ಪಕ್ಕಕ್ಕೆ ತಿರುಗಿಸಿದಳು ರೇಣು. ಬಸ್ಸು ಮುಂದಕ್ಕೆ ಹೋಯಿತು. ಅಷ್ಟರಲ್ಲಿ ರೆಡ್ ಸಿಗ್ನಲ್ ಬಿದ್ದು ಬಿಡ್ತು. ಹಾಳಾದ್ದು ಈ ಸಿಗ್ನಲ್‌ನಲ್ಲಿ ಮೂರು ನಿಮಿಷ ಆಗುತ್ತೆ ಅಂತ ಬೈದುಕೊಳ್ಳುತ್ತಿದ್ದಳು. ಅವರು ಮೀಟಿಂಗ್ ಶುರು ಮಾಡಲು ಅವಳಿಗೋಸ್ಕರ ಕಾಯುತ್ತಿರುತ್ತಾರೆ ಅಂತ ಗೊತ್ತಿತ್ತು.

ಆಗ ಸಂಭ್ರಮಿಸುತ್ತಾ, ಕೈ ತಟ್ಟುತ್ತಾ ನಾಲ್ಕು ಹಿಜಡಾಗಳು ಬಂದರು. ಒಬ್ಬೊಬ್ಬಳು ಒಂದೊಂದು ಗಾಡಿಯ ಹತ್ತಿರ ಹೋಗಿ ವಸೂಲಿ ಮಾಡುತ್ತಿದ್ದರು. ರೇಣು ಮುಂದೆ ನಿಂತಿದ್ದ ಮೋಟಾರ್ ಬೈಕ್‌ನವನು ಕೊಡಲ್ಲ ಹೋಗು ಎನ್ನುವಂತೆ ಕೆಟ್ಟದಾಗಿ ಅಟ್ಟುವಂತೆ ಕೈ ಸನ್ನೆ ಮಾಡುತ್ತಾ 'ಭಿಕ್ಷೆ ಬೇಡಿದ್ದನ್ನೆಲ್ಲ ನೀವು ಸಾಯಂಕಾಲ ಬಿಯರ್ ಕುಡೀತೀರಿ ಅಂತ ನಂಗೆ ಗೊತ್ತಿಲ್ವೇನೇ? ನಿಮ್ಮ ಬದಲು ಹೊಟ್ಟೆಗೆ ಇಲ್ಲದವರಿಗೆ ಕೊಡೋದು ಬೆಸ್ಟು' ಅಂದ. ಹಿಜಡಾಗೆ ಕೋಪ ಬಂದು ಅಸಹ್ಯವಾಗಿ ಬೈದಳು. ಅವನು ಥಟ್ಟನೆ ಛಟೀರನೆ ಅವಳ ಕಪಾಳಕ್ಕೆ ಬೀಸಿ ಹೊಡೆದ. ತಕ್ಷಣ ಅಲ್ಲೊಂದು ರಣರಂಗವೇ ಸೃಷ್ಟಿಯಾಗಿಬಿಟ್ಟಿತು. ಹಿಜಡಾಗಳ ಎತ್ತರದ ದನಿಯ ಕೂಗಿಗೆ ಎಲ್ಲೆಲ್ಲಿಂದಲೋ ಏಳೆಂಟು ಹಿಜಡಾಗಳು ಬಂದು ಸೇರಿಬಿಟ್ಟರು. ಎಲ್ಲರೂ ಮೋಟಾರ್ ಬೈಕ್‌ನವನ ಕತ್ತಿನ ಪಟ್ಟಿ ಹಿಡಿದು ಜಗ್ಗುತ್ತಾ, ತಳ್ಳುತ್ತಾ ಅತ್ಯಂತ ಹೊಲಸು ಭಾಷೆಯಲ್ಲಿ ಬೈಯತೊಡಗಿದರು.

ರೇಣು ತಕ್ಷಣ ಸ್ಕೂಟರ್ ಸ್ಟ್ಯಾಂಡ್ ಹಾಕಿ ಗುಂಪಿನ ಹತ್ತಿರ ಹೋದಳು.

'ಏ... ಬಿಡಿ... ಬಿಡಿ... ಹೊಡಿಬೇಡಿ... ಹೊಡಿಬೇಡಿ...' ಎಂದು ತಡೆಯಲು ಯತ್ನಿಸುತ್ತಿದ್ದಂತೆ ಅವನು ಹೇಗೋ ತಪ್ಪಿಸಿಕೊಂಡು ಬೈಕ್ ಶುರು ಮಾಡಿ ರೆಡ್ ಲೈಟ್ ಇದ್ದರೂ ಎಡಕ್ಕೆ ತಿರುಗಿಸಿಕೊಂಡು ಸರಕ್ಕನೆ ಕಣ್ಮರೆಯಾದ.

ಎಲ್ಲರೂ ಈಗ ರೇಣುವಿನ ಕಡೆಗೆ ತಿರುಗಿದರು.

'ನೀನ್ಯಾವಳೇ ಅವನ ಸಪೋರ್ಟ್‌ಗೆ ಬರಕ್ಕೆ?'

'ಅವನೇನು ನಿನ್ ಗಂಡ ಏನೇ?'

'ನಿನ್ ಮಿಂಡ ಏನೇ?'

'ಅಲ್ಲೇನ್ ನೋಡ್ತಿಯಾ ಇಲ್ನೋಡೇ...'

'ಕಳ್ ಮುಂಡೆ ನಿನ್...' ಎನ್ನುತ್ತಾ ಅವಳನ್ನೂ ಹಿಡಿದು ಎಳೆದಾಡಿದರು.

ಅವಳ ದುಪಟ್ಟಾ ಸೆಳೆದು ಒಬ್ಬಳು ತಾನು ಹೊದ್ದುಕೊಂಡಳು. ಡೀಪ್ ನೆಕ್ ಕಮೀಜಿನಿಂದ ಅವಳ ಬಿಳಿ ಎದೆಸೀಳು ಕಾಣಿಸತೊಡಗಿ, ಸುತ್ತಲಿನ ಜನರಿಗೆ ಅದೊಂದು ರಮ್ಯದೃಶ್ಯವಾಯಿತು.

ರೇಣು ಶಕ್ತಿ ಮೀರಿ ಕೂಗಿ ಕೊಳ್ಳತೊಡಗಿದಳು.

'ಏ... ನಾನು ಎಲ್‌ಜಿಬಿಟಿ ಆ್ಯಕ್ಟಿವಿಸ್ಟ್... ನಿಮ್ಮ ಒಳ್ಳೇದಕ್ಕೆ ಎಷ್ಟು ಕಷ್ಟಪಟ್ಟಿದ್ದೀನಿ...'

ಆದರೆ, ಅವಳ ಮಾತು ಕೇಳಿಸಿಕೊಳ್ಳುವ ಮನಸ್ಥಿತಿಯಲ್ಲಿ ಅವರಿರಲಿಲ್ಲ.

ಸಿಗ್ನಲ್ ಲೈಟ್ ಬಿದ್ದು ಕೆಲವು ವಾಹನಗಳು ಸರಿದು, ಆ ಜಾಗಕ್ಕೆ ಮತ್ತಷ್ಟು ವಾಹನಗಳು ಬಂದು ನಿಂತವು. ಅಲ್ಲಾಗಲೇ ಜನಗಳ ಗುಂಪು ಸೇರಿದ್ದರಿಂದ ಟ್ರಾಫಿಕ್ ಕೂಡಾ ಜಾಮ್ ಆಗಿಬಿಟ್ಟಿತು. ಅಷ್ಟರಲ್ಲಿ ಗಿರೀಶನ ಕಾರು ಕೂಡಾ ಅಲ್ಲಿಗೆ ಬಂತು. ಇದೇನು ಗಲಾಟೆ ಎಂದು ಇಣುಕಿ ನೋಡಿದ ಗಿರೀಶ್. ಹಿಜಡಾಗಳು ರೇಣುವನ್ನು ಹಿಡಿದು ಎಳೆದಾಡುತ್ತಿದ್ದರು.

ತಕ್ಷಣ ಗಿರೀಶ್ ಕಾರಿನಿಂದ ಇಳಿದು ಜನರನ್ನು ತಳ್ಳುತ್ತಾ ರೇಣು ಹತ್ತಿರ ಬಂದು ಅವಳನ್ನು ಎಳೆದಾಡುತ್ತಿದ್ದ ಹಿಜಡಾಳ ಕೈಯಿಂದ ಬಿಡಿಸಿಕೊಂಡು ಎಳೆದುಕೊಂಡು ಬಂದು ಕಾರಿನಲ್ಲಿ ಕೂರಿಸಿ ಬಾಗಿಲು

